ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಇದನ್ನು ಇಲಾಖೆಯಿಂದ ಪರಿಶೀಲಿಸುತ್ತೇನೆ.

243 ಶ್ರೀ ಸುಭಾಷ್ ಆರ್. ಗುತ್ತೇದಾರ್ : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಅಳಂದ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಈ ವರ್ಷದ ಹಂಗಾಮಿನಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ರೈತರು ಬೆಳೆದಿರುವ ಕಬ್ಬನ್ನು ನುರಿಸಲು ಕ್ರಮ ಕೈಗೊಳ್ಳುವುದೇ;

ಇ) ಪ್ರಸಕ್ತ ವರ್ಷದಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸದಿದ್ದಲ್ಲಿ ಕಬ್ಬನ್ನು ಬೆಳೆದ ರೈತರಿಗೆ ಪರಿಹಾರವನ್ನೇನಾದರೂ ನೀಡಲು ಕ್ರಮ ಕೈಗೊಳ್ಳುವುದೇ;

ಈ) ಈ ಕಾರ್ಖಾನೆಯ ಕಾರ್ಮಿಕರ ಬಗ್ಗೆ ಈವರೆವಿಗೆ ಯಾವ ರೀತಿಯ ಕ್ರಮ ಕೈಗೊಂಡಿದೆ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ಹೌದು.

ಆ) ಹೌದು.

ಇ) ಕಾರ್ಖಾನೆಯನ್ನು ಮತ್ತೆ ದೀರ್ಘಾವಧಿ ಗುತ್ತಿಗೆ ಮೇಲೆ ನೀಡಿ ಪ್ರಸಕ್ತ ಸಾಲಿನಿಂದ ಕಬ್ಬು ನುರಿಯುವ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಮತ್ತು ಕಾರ್ಖಾನೆ ವ್ಯಾಪ್ತಿಯ ರೈತರು ಬೆಳೆದ ಕಬ್ಬನ್ನು ನುರಿಸಲು ಎಲ್ಲಾ ರೀತಿಯ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗುವುದು.

ಈ) ಕಾರ್ಖಾನೆಯ ಗುತ್ತಿಗೆದಾರರು ಗುತ್ತಿಗೆ ರದ್ದುಗೊಳಿಸಿರುವ ದಿನಾಂಕ 18.5.2009ರವರೆಗೆ ಕಾರ್ಮಿಕರ ವೇತನ ಬಾಕಿ ಪಾವತಿಸಲು ಒಪ್ಪಿರುವರು. ತದನಂತರದ ಅವಧಿಯ ವೇತನವನ್ನು ಕಾರ್ಖಾನೆಯನ್ನು

ಗುತ್ತಿಗೆಗೆ ಪಡೆಯುವ ಭಾವಿ ಗುತ್ತಿಗೆದಾರರಿಂದ ಮುಂಗಡ ಗುತ್ತಿಗೆ ಹಣ ಪಡೆದುಕೊಂಡು ಇತ್ಯರ್ಥಗೊಳಿಸಲು ಕ್ರಮವಹಿಸಲಾಗುವುದು.

ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ್): ಸನ್ಮಾನ್ಯ ಉಪಾಧ್ಯಕ್ಷರೆ, ಆಳಂದ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಈ ವರ್ಷದ ಹಂಗಾಮಿನಲ್ಲಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎನ್ನುವ ಪ್ರಶ್ನೆಗೆ ಹೌದು ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಹಾಗಿದ್ದಲ್ಲಿ, ರೈತರು ಬೆಳೆದಿರುವ ಕಬ್ಬನ್ನು ನುರಿಸಲು ಕ್ರಮ ಕೈಗೊಳ್ಳುವುದೇ: ಎನ್ನುವ ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ. ಆದರೆ, ಇಲ್ಲಿ ಹೋದ ವರ್ಷ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಾರಂಭವೇ ಆಗಿಲ್ಲ. ಈ ವರ್ಷ ಪ್ರಾರಂಭವಾಗುತ್ತದೆ ಎನ್ನುವುದು ಯಾವ ಗ್ಯಾರಂಟಿ? ದೀರ್ಘಕಾಲ ಟೆಂಡರ್ ಕರೆದು, ಮತ್ತೊಬ್ಬರಿಗೆ ಕೊಟ್ಟು, ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಟೆಂಡರ್ ಕರೆಯುವುದು ಯಾವಾಗ? ಗುತ್ತಿಗೆ ಕೊಡುವುದು ಯಾವಾಗ? ಅವರದ್ದು ಏಳು ವರ್ಷದವರೆಗೂ ಗುತ್ತಿಗೆ ಇತ್ತು. ಮಧ್ಯೆದಲ್ಲಿ ಅವರನ್ನು ಏಕೆ ಬಿಡಿಸಿದಿರಿ? ಬೇರೆಯವರು ದೀರ್ಘಕಾಲದ ಅವಧಿಗೆ ಬರುತ್ತಾರೆಯೇ? ಅಲ್ಲಿಯವರೆಗೂ ಅಲ್ಲಿಯ ಕಬ್ಬು ಬೆಳೆಗಾರರು ಮತ್ತು ಕಾರ್ಮಿಕರ ಗತಿ ಏನಾಗಬೇಕು? ರೇಣುಕಾ ಶುಗರ್ ಕಂಪನಿಯವರು ಪಕ್ಕದಲ್ಲಿ ಸ್ವಂತ ಫ್ಯಾಕ್ಟರಿ ಹಾಕಿಕೊಂಡು ಈ ಫ್ಯಾಕ್ಟರಿಯನ್ನು ಬಂದ್ ಮಾಡಿದ್ದಾರೆ. ಕಬ್ಬನ್ನೆಲ್ಲಾ ತಮ್ಮ ಕಾರ್ಖಾನೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ಇದನ್ನು ಜೀವಂತವಾಗಿ ಇಡುತ್ತೀರಾ ಅಥವಾ ಇಲ್ಲಿಗೇ ಬಂದ್ ಆಗುತ್ತದೆಯೇ ಎನ್ನುವ ನಿಜಾಂಶವನ್ನು ನಮಗೆ ತಿಳಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು): ಈಗಾಗಲೇ ಈ ವರ್ಷದ ಹಂಗಾಮಿನಲ್ಲಿ ಆಳಂದ್ ಶುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತೇವೆ. ಆದಷ್ಟು ಬೇಗನೆ ಟೆಂಡರ್ ಪ್ರಕ್ರಿಯೆಯನ್ನು ಮಾಡಿ, ಈ ವರ್ಷದ ಹಂಗಾಮಿನಲ್ಲಿ ಪ್ರಾರಂಭ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಈ ಹಿಂದೆ ಕೊಟ್ಟಿರುವಂಥ ರೈತರಿಗೆ ನಾವು ಯಾವುದೇ ಬಾಕಿಯನ್ನು ಉಳಿಸಿಲ್ಲ. ಈ ಸಲವೂ ರೈತರಿಗೆ ಹಾಗೂ ಕಾರ್ಮಿಕರಿಗೆ ತೊಂದರೆಯಾಗದ ರೀತಿಯಲ್ಲಿ ಇನ್ನೊಂದು ತಿಂಗಳೊಳಗಾಗಿ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡುತ್ತೇವೆ. ಇದೇ ಹಂಗಾಮಿನಲ್ಲಿ ಆಳಂದ್

ಶುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸುಭಾಷ ಆರ್. ಗುತ್ತೇದಾರ್: ಹಿಂದಿನದವರ ಟೆಂಡರ್ ಅನ್ನು ಏಕೆ ರದ್ದು ಮಾಡಿದಿರಿ? ಯಾವ ಕಾರಣದಿಂದ ಟೆಂಡರ್‌ಅನ್ನು ರದ್ದು ಮಾಡಿದಿರಿ?

ಶ್ರೀ ಶಿವರಾಜ್ ಎಸ್. ತಂಗಡಗಿ: ಈ ಹಿಂದೆ ರೇಣುಕಾ ಶುಗರ್ಸ್ ಅವರಿಗೆ ನಾವು ಕೊಟ್ಟಿದ್ದೆವು. ನ್ಯಾಯಾಲಯದಲ್ಲಿ Criminal attachment ಆದೇಶ ಅಂದರೆ, ಬಹಳಷ್ಟು ಬ್ಯಾಂಕುಗಳಿಗೆ, ಸಹಕಾರಿ ಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕ್, PF ಇವೆಲ್ಲವುಗಳ attachment ಆದೇಶ ಬಂದಿರುವುದರಿಂದ ಆ ರೇಣುಕಾ ಶುಗರ್ಸ್ ಅವರು ನಾವು ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ನಮಗೆ ಬರೆದುಕೊಟ್ಟರು. ಆ attachment ಇರುವುದರಿಂದ ಮತ್ತೆ ನಾವು ಪ್ರಾರಂಭ ಮಾಡಿದರೆ ನಾಳೆ ಬ್ಯಾಂಕ್‌ನವರು ಬಂದು ನಮ್ಮ ಸಕ್ಕರೆಯನ್ನು ತೆಗೆದುಕೊಂಡು ಹೋಗಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡು ಅವರು ನಮಗೆ ಆಗುವುದಿಲ್ಲವೆಂದು, ಈ attachment ಅನ್ನು clear ಮಾಡಿಕೊಟ್ಟರೆ, ನಾವು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೇವೆ. ಈಗಾಗಲೇ ನಾನು ಒಂದು ಸುತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಆದಷ್ಟು ಬೇಗನೆ ಪ್ರಾರಂಭ ಮಾಡುತ್ತೇವೆ.

ಉಪಾಧ್ಯಕ್ಷರು: ಆಯಿತು, ಅವರು ಹೇಳಿದ್ದಾರಲ್ಲಾ.

ಶ್ರೀ ಸುಭಾಷ ಆರ್. ಗುತ್ತೇದಾರ್: ಒಂದು ನಿಮಿಷ ಮಾನ್ಯ ಉಪಾಧ್ಯಕ್ಷರೆ, ಈ attachment ಮೊದಲೇ ಡಿ.ಸಿ.ಸಿ ಬ್ಯಾಂಕ್, ಎಲ್ಲಾ ಬ್ಯಾಂಕ್‌ಗಳಿಂದ ಬಾಕಿಗಳು ಇದ್ದೂ, ಅವರು ನೋಡೇ ತೆಗೆದುಕೊಂಡಿದ್ದಾರೆ. ಆದರೂ ಕೂಡ ಮಧ್ಯದಲ್ಲಿ ಏಕೆ ಬಿಡಿಸಿದಿರಿ? ಅವರದ್ದು ಏಳು ವರ್ಷ ಪೂರ್ಣ ಮಾಡಿಸಬೇಕಾಗಿತ್ತು.

ಶ್ರೀ ಶಿವರಾಜ್ ಎಸ್. ತಂಗಡಗಿ: ಅವರು ನೋಡೇ ತೆಗೆದುಕೊಂಡಿದ್ದು. ಆದರೆ ನ್ಯಾಯಾಲಯಕ್ಕೆ ಹೋಗಿ attachment ಮಾಡಿದ್ದರಲ್ಲಾ, attachment ಮೊದಲು ಇರಲಿಲ್ಲ. ಅದಕ್ಕೆ ಸಹಕಾರ ಮಾಡುತ್ತೇವೆ ಎಂದು ಹೇಳಿದ್ದರು.

Attachment ತಂದಿದ್ದರಿಂದ ಅವರು ಒಲ್ಲೆ ಎನ್ನುವ ಮಾತನ್ನು ಹೇಳಿದ್ದರಿಂದ ಈಗ attachment clear ಮಾಡಿ ಪ್ರಾರಂಭ ಮಾಡುತ್ತೇವೆ.

80 ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕೋಡಿ–ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಅಂಗವಿಕಲರ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಅಂಗವಿಕಲರಿಗೆ ಸರ್ಕಾರದಿಂದ ಯಾವ ಯೋಜನೆಯಲ್ಲಿ ಮಾಸಿಕ ಸಹಾಯಧನ ನೀಡಲಾಗುತ್ತಿದೆ; ವಿವರ ನೀಡುವುದು);

ಆ) ಈ ಅಂಗವಿಕಲ ಫಲಾನುಭವಿಗಳ ಆಯ್ಕೆಯ ಮಾನದಂಡವೇನು; ಇನ್ನುಳಿದ ಅಂಗವಿಕಲರಿಗೆ ಎಂದಿನಿಂದ ಮಾಸಿಕ ಸಹಾಯಧನ ನೀಡಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಚಿಕ್ಕೋಡಿ ಸದಲಗ ಮತಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಅಂಗವಿಕಲರ ಸಂಖ್ಯೆ 4509.

ಇದರಲ್ಲಿ 4,100 ಅಂಗವಿಕಲರು ಸರ್ಕಾರದಿಂದ ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಮಾಸಿಕ ವೇತನವನ್ನು ಪಡೆಯುತ್ತಿರುವರು.

ಆ) ಅಂಗವಿಕಲ ಮಾಶಾಸನವನ್ನು ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ಫಲಾನುಭವಿಗಳು ಹೊಂದಿರಬೇಕು.

1. ಫಲಾನುಭವಿಯು ಕನಿಷ್ಠ ಶೇ. 40ರಷಟು ಅಂಗವಿಕಲತೆ ಹೊಂದಿರಬೇಕು.
2. ಪೋಷಕರ ಆದಾಯ ವಾರ್ಷಿಕ ರೂ. 6000/–ಗಳಿಗಿಂತ ಕಡಿಮೆ ಇರಬೇಕು.
3. ಆಯಾ ತಾಲ್ಲೂಕಿನ ನಿವಾಸಿಯಾಗಿರಬೇಕು.